RNU AIR DHARWAD

# OCTOBER 26, 2026

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಅಂತರ್ಜಲ ಮಟ್ಟ, ರಾಜ್ಯಾದ್ಯಂತ** ಕುಸಿಯುತ್ತಿದೆ. ಬಹುಗ್ರಾಮ ಕುಡಿಯುವ ನೀರು ಮತ್ತು ಏಕ ಗ್ರಾಮ ಕುಡಿಯುವ ನೀರು ಯೋಜನೆಗೆ, 67 ಸಾವಿರ ಕೋಟಿ ರೂಪಾಯಿ, ವ್ಯಯಿಸಲಾಗುತ್ತಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಈಶ್ವರ ಖಂಡ್ರೆ ತಿಳಿಸಿದ್ದಾರೆ. ಶಿವಮೊಗ್ಗದ, ಅಂಬೇಡ್ಕರ ಭವನದಲ್ಲಿ, ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಮಾತನಾಡಿದರು. ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ, ಶೇಕಡ 40 ರ ಷ್ಟ ಕಾಮಗಾರಿಗಳು ಬಾಕಿ ಇವೆ. ಎಲ್ಲ ಕಾಮಗಾರಿಗಳನ್ನು ಕಾಲಮಿತಿಯಲ್ಲಿ, ಗುಣಮಟ್ಟ ಖಾತ್ರಿಯೊಂದಿಗೆ, ಪೂರ್ಣಗೊಳಿಸಿ, ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವಂತೆ, ಸೂಚಿಸಿದ್ದಾಗಿ, ಸಚಿವ ಖಂಡ್ರೆ ನುಡಿದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ದೂರದೃಷ್ಟಿಯ ಪ್ರತೀಕವಾದ, "ಮನ್ ಕೀ ಬಾತ್" ಎಲ್ಲರ ಮನೆ–ಮನ ತಲುಪುತ್ತಿದೆ; ಜನಸಾಮಾನ್ಯರ ಸಾಧನೆಗಳನ್ನು ದೇಶದ ಮುಂದೆ ಪ್ರಚುರಪಡಿಸುವ, ಒಂದು ಅಪೂರ್ವ ವೇದಿಕೆಯಾಗಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಹೇಳಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಶ್ರೀ ಓಲೆ ಮಠದ, ಗುರುಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ, ಸ್ಥಳೀಯರೊಂದಿಗೆ ಸಚಿವರು, 139ನೇ ಆವೃತ್ತಿಯ ಮನದ ಮಾತು ಆಲಿಸಿದರು.

<><><>

**ರಾಮಾಯಣ ಮಹಾಕಾವ್ಯವನ್ನು ರಚಿಸಿದ,** ಆದಿ ಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ದಿನವಾದ ಇಂದು, ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ,

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಸೇರಿದಂತೆ ಗಣ್ಯರು ನಾಡಿನ ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ.

<><><>

**ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕಿನ,** ಹಲಗಲಿ ಗ್ರಾಮದಲ್ಲಿ, ಹಲಗಲಿ ಬೇಡರ ಬಂಡಾಯದ ಇತಿಹಾಸದ ಕುರಿತ, ಜನಜಾಗೃತಿಗಾಗಿ ಆಯೋಜಿತ, ವೀರಜ್ಯೋತಿ ಕಾಲ್ನಡಿಗೆ ಯಾತ್ರೆ, ಮಹರ್ಷಿ ವಾಲ್ಮೀಕಿ ಜಯಂತಿ ದಿನವಾದ ಇಂದು ವಾಳಕಿ ಗ್ರಾಮ ತಲುಪಿದೆ. ಬ್ರಿಟಿಷರ ವಿರುದ್ಧ ಹೋರಾಡಿದ, ಹಲಗಲಿ ಬೇಡರ ಶೌರ್ಯದ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಪತ್ರಕರ್ತ, ಮುಧೋಳದ ಮಲ್ಲಿಕಾರ್ಜುನ ಹೆಗ್ಗಳಗಿ

<><><>

**ಮಲ್ಲಿಕಾರ್ಜುನ ಹೆಗ್ಗಳಗಿ– 41 ಸೆಕೆಂದುಗಳು**

<><><>

**'ಸ್ವಚ್ಛತೆಯೇ ಸೇವೆ' ವಿಶೇ ʼ ಅಭಿಯಾನ–** 6.0 ಭಾಗವಾಗಿ, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಉಪ ಕಾರ್ಯದರ್ಶಿ ಬ್ರಜೇಶ್ ಗೊದ್ರಾ, ಬೆಂಗಳೂರು ಆಕಾಶವಾಣಿ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಪ್ರಾದೇಶಿಕ ಸುದ್ದಿ ವಿಭಾಗದ ಮುಖ್ಯಸ್ಥರು ಹಾಗೂ ಸಹಾಯಕ ನಿರ್ದೇಶಕರಾದ ಸುಹಾಸ್ ಆರ್, ಸುದ್ದಿ ವಿಭಾಗದ ಕಾರ್ಯವೈಖರಿ ಹಾಗೂ ಸ್ವಚ್ಛತಾ ಹಿ ಸೇವಾ ವಿಶೇ ʼ ಅಭಿಯಾನದ ಅಡಿಯಲ್ಲಿ ಕೈಗೊಳ್ಳಲಾದ ವಿವಿಧ ಕ್ರಮಗಳ ಕುರಿತು ಮಾಹಿತಿ ನೀಡಿದರು.

<><><>

**ಬೆಳಗಾವಿ ಜಿಲ್ಲಾ ಪಂಚಾಯಿತಿ,** ಶಿಕ್ಷಕರ ದಿನಾಚರಣೆ ಹಿನ್ನೆಲೆ, ಕಳೆದ ಸೆಪ್ಟೆಂಬರ್ 3 ರಂದು ಆಯೋಜಿಸಿದ್ದ, ರಕ್ತದಾನ ಶಿಬಿರದಲ್ಲಿ, ಒಂದೇ ದಿನ 4 ಸಾವಿರದ 6 ನೂರಾ 34 ಯೂನಿಟ್ ರಕ್ತ ಸಂಗ್ರಹವಾಗಿ, ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ದಾಖಲಾಗಿದೆ. ಕಿತ್ತೂರು ಉತ್ಸವದಲ್ಲಿ, ಮುಖ್ಯಮಂತ್ರಿಯವರು, ಬೆಳಗಾವಿ ಜಿಲ್ಲಾ ಪಂಚಾಯಿತಿ ಸಿ.ಇ.ಓ. ರಾಹುಲ್ ಶಿಂಧೆ ಅವರಿಗೆ, ಪ್ರಮಾಣಪತ್ರ ನೀಡಿ, ಗೌರವಿಸಿದರು. ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯ, ಆರ್.ಹರೀಶ ಪಾಲ್ಗೊಂಡಿದ್ದರು.

<><><>

**ಡಾಕ್ಟರ್ ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ, ಇಂದು** ಸಂಜೆ 5 ಗಂಟೆಗೆ, ಧಾರವಾಡದ ಸಾಧನಕೇರಿಯಲ್ಲಿರುವ, ಡಾಕ್ಟರ್ ದ.ರಾ.ಬೇಂದ್ರೆ ಭವನದಲ್ಲಿ, ವರಕವಿ ದ.ರಾ.ಬೇಂದ್ರೆ ಅವರ 45 ನೇ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಹುಬ್ಬಳ್ಳಿಯ ಹಿರಿಯ ಸಾಹಿತಿ ಪ್ರೊಫೆಸರ್ ಕೆ.ಎಸ್.ಕೌಜಲಗಿ, ವಿಶೇಷ ಉಪನ್ಯಾಸ ನೀಡಲಿದ್ದಾರೆ. ಡಾಕ್ಟರ್ ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಡಾಕ್ಟರ್ ಸರಜೂ ಕಾಟ್ಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸ್ವರ ಸಂವಾದಿನಿ ಸಂಗೀತ ವಿದ್ಯಾಲಯದ ಕಲಾತಂಡದಿಂದ ಭಾವಗೀತೆ ಗಾಯನ ನಡೆಯಲಿದೆ.

<><><>

**ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲೂಕು,** ಹೊಸ ಯಳನಾಡು ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು, ಗುಜರಾತ್‌ನಲ್ಲಿ ಆಯೋಜಿತ, ರಾಷ್ಟ್ರ ಮಟ್ಟದ 6 ನೇ ಭಾರತೀಯ ವಿಜ್ಞಾನ ತಂತ್ರಜ್ಞಾನ ಉತ್ಸವದಲ್ಲಿ ದ್ವಿತೀಯ ಸ್ಥಾನ ಪಡೆದು ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿನಿಯರಾದ ಹರ್ಷಿತಾ ಹಾಗೂ ದೀಕ್ಷಾ, ಶಾಲೆಯ ವಿಜ್ಞಾನ ಸಹ ಶಿಕ್ಷಕ ಜಿ.ಬಿ ರೇಣುಕರಾಜ್ ಮಾರ್ಗದರ್ಶನದಲ್ಲಿ, ‘ತ್ಯಾಜ್ಯ ನಿರ್ವಹಣೆಗಾಗಿ ಆರ್–5 ಸೂತ್ರ’ ಎಂಬ ವಿ ‘ಯದಡಿ, ಸಿದ್ಧಪಡಿಸಿದ ಮಾದರಿಗೆ ಈ ಗೌರವ ಲಭಿಸಿದೆ.

<><><>

**ಯಾದಗಿರಿ ಜಿಲ್ಲೆಯ 25 ಕೇಂದ್ರಗಳಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ** ನಡೆಸಿದ, ಕಂದಾಯ ಇಲಾಖೆಯ ಭೂಮಾಪಕ ಹಾಗೂ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ನೇರ ನೇಮಕಾತಿಗಾಗಿ ಪರೀಕ್ಷೆಯಲ್ಲಿ, 6 ಸಾವಿರದ 918 ಜನ ಅಭ್ಯರ್ಥಿಗಳು ಪಾಲ್ಗೊಂಡಿದ್ದರು ಎಂದು ಜಿಲ್ಲಾಧಿಕಾರಿ ರಾಹುಲ ತುಕಾರಾಮ ಪಾಂಡ್ವೆ ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>